ಇಷ್ಟ ಆಗ್ತಿರಲಿಲ್ಲ. ಇವ್ರಿಗೆ ಇಷ್ಟಾದ್ರ ಅವರಿಗೆ ಇಷ್ಟ ಆಗ್ತಿರಲಿಲ್ಲ. ಹಿಂಗ ಗಟ್ಟಿಯಾಗದೆ ಹೊಂಟಿದ್ರು. ವರಗಳು ಮಾತ್ರ ವಾರಕ್ಕೊಮ್ಮೆ ಬರೋದು ನಿಂತಿರಲಿಲ್ಲ. ಅಂಜುಗೆ ವರಗಳ ತಿರುಗಾಟ, ಅಪ್ಪನ ಉಪಾಯ ಗೊತ್ತಾಗಿ 'ನೀನಿಲ್ದ ನಾ ಒಂದು ಚಣನೂ ಬದುಕಲಾರೆ, ನೀನಿಲ್ದ ಪ್ರಪಂಚ ಶೂನ್ಯ ಅನಿಸ್ತಿದೆ.. ಊರಾಗ ದೇವ್ರು ಹಿಡಿತಿಯೋ ಬಿಡಿತಿಯೋ ಗೊತ್ತಿಲ್ಲ. ಎಲ್ಲಾದ್ರು ದೂರ ಕರ್ಕೊಂಡು ಹೋಗು.. ಇಲ್ಲಂದ್ರ ಸತ್ತು ಬಿಡುವಷ್ಟು ನೋವಾಗ್ತಿದೆ.. ನೀ ಊರಮಂದಿಗೆ ದೇವ್ರಾದ್ರೆ ನನಗ ಮಾತ್ರ ಲವ್ವರೇ.. ಭಕ್ತರು ನಿನಗ ಬೀರಪ್ಪಾಜೀ.. ತಾತಾ.. ಅಪ್ಪಾಜಿಯಂತ ಸಾವಿರ ಕರಿಲಿ.. ನಾನ್‌ಮಾತ್ರ ನಿನಗ 'ಲೇ.. ಬೀರಲೇ..' ಅಂತ ಕರಿತಿನಿ. ಅವ್ರೆಲ್ಲಾ ನಿನ್‌ಮ್ಯಾಲ ದೇವ್ರ ಭಕ್ತಿಲೆ ಕರದ್ರ, ನಾನು ಮಾತ್ರ ಎದಿಗಾರಿಕಿಯಿಂದಲೇ ಕರಿತಿನಿ ಅದೇನುಮಾಡ್ತಿ ಮಾಡಿಕ್ಯಾ ಹೋಗು. ಈ ಮನ್ಯಾಗ ನನಗ ವ್ಯಾಪಾರಕ ಹಚ್ಚಿದಂಗ ಆಗೈತಿ, ಇಲ್ಲಿ ನನ್ನ ಆಸೆ, ಕನಸಿಗೆ ಬೆಲೀನ ಇಲ್ದಂಗ ಆಗೈತಿ. ನನ್ನ ಕಷ್ಟ,ಸುಖ ಕೇಳೋರು ಇಲ್ದಂಗ ಆಗೈತಿ, ಅಪ್ಪ ಇದ್ದು ಇಲ್ದಂಗ ಆಗ್ಯಾನ. ಬರಿ ರಾಜಕೀಯ ಗುಂಗಿನೊಳಗ ಇರ್ತಾನ.. ಅಮ್ಮ ತೀರಿದಮ್ಯಾಲಂತೂ ಪೂರ ಬದಲಾಗಿ ಬಿಟ್ಟಾನ.. ಅಲ್ಯಾರೋ ಒಬ್ಬಾಕಿನ ತ್ವಾಟದಾಗ ಇಟ್ಟಾನಂಥ ಹಗಲುರಾತ್ರಿ ಅಲ್ಲೇ ಬಿದ್ದಿರ್ತಾನ.. ನೋಡಾಕ ವರ ಬಂದಾಗ ಮಾತ್ರ ಮನಿಗೆ ಬಂದು ವಗ್ಗಾಣಿ, ಮಿರ್ಚಿ, ಚಾವು ಬಿಸಿಬಿಸಿದು ಮಾಡಿಸಿ ಅವ್ರಕೂಡ ಮಾತಾಡಿ ಮತ್ತೆ ತ್ವಾಟ ಸೇರಿಬಿಡ್ತಾನ.. ತ್ವಾಟದಾಗ ಆ ತುಡಿಗಿ ಜತೆ ಕೂತು ಅಲ್ಲಿಲ್ಲಿ ಪೋನಚ್ಚಿ ಕನ್ಯೆ ನೋಡಿಕೊಂಡು ಹೋಗ್ರೆಂತ ಹೇಳ್ತಾನ. ಆ ಎಮ್ಮೆಲ್ಲಿ, ಈ ಎಮ್ಮೆಲ್ಲೆಂತ ಖಾಲಿಪುಕ್ಸಟ್ಟೆ ಊರೂರು ಗಂಜಿಬಟ್ಟೆ ತೊಟ್ಟು ತಿರುಗಾಡ್ತಾನ.. ಕಂಡಕಂಡಲ್ಲಿ ಚಿಕನ್, ಮಟನ್, ಕುಡೇದು ಮಾಡ್ತಾನ.. ಮನ್ಯಾಗ ಸೂಗುರೇಶ್ವರ ದೇವ್ರು ಐತೆಂಬುದು ಅರಿವಿಲ್ಲ.. ಅಮ್ಮ ಇದ್ದಾಗ ಎಷ್ಟು ಹೇಳಿದ್ರ ಕೇಳುತಿದ್ದಿಲ್ಲ.. ಈಗ ನನ್ ಮಾತೇನು ಕೇಳ್ತಾನ.. ಈ ಊರಾಗಿನ ಮಂದಿ ದೇವ್ರು ತಪ್ಪಿದ್ರ ರಾಜಕೀಯ ಮಾಡ್ತಾರ.. ರಾಜಕೀಯ ತಪ್ಪಿದ್ರ ದೇವ್ರಿಗೆ ಗಂಟುಬೀಳ್ತಾರ.. ಇಲ್ಲಿ ಯಾರಿಗ್ಯಾರು ಮನುಷ್ಯಾರಾಗಿ ಉಳಿದಿಲ್ಲ.. ಒಳಗೊಳಗ ವಿಷ ಕಾರ್ತಾರ.. ಈ ಮನ್ಯಾಗ, ಈ ಊರಾಗ ಪಂಜರದ ಗಿಳಿಯಾಗಿ ಬದುಕಲಾರೆ.. ಎಲ್ಲಾದ್ರು ದೂರ ಕರ್ಕೊಂದು ಹೋಗು..' ಅಂತ ಅಂಜು ಬೀರನಿಗೆ ಚಾಟ್ ಮೂಲಕ ಗಂಟು ಬಿದ್ದಿದ್ಲು.

ಬೀರನಿಗೆ ಈಗೀಗ ಅಪ್ಪನ ದೇವ್ರ ಬಗ್ಗೆ ಜವಾಬ್ದಾರಿ

